ತೋರಿಸುತ್ತೇವೆ. ಹೊಸ ಕಾನೂನನ್ನು ಬೇಕಾದರೆ ಹೊಸದಾಗಿ ತರೋಣ. ಆದರೆ ಇರುವ ಕಾನೂನಿನಲ್ಲಿ ಯಾವ ರೀತಿ ತಡೆಗಟ್ಟಬೇಕೋ ಅದನ್ನು ಮಾಡೋಣ. ಪರೀಕ್ಷಾ ಪದ್ಧತಿಯನ್ನು ಬದಲಾವಣೆ ಮಾಡುವ ವಿಚಾರ ಬಂದಿದೆ. ಅದನ್ನು ನಾವು ವಿಚಾರ ಮಾಡಬೇಕಾಗಿದೆ. ಈಗಿನ ಪರೀಕ್ಷಾ ಪದ್ಧತಿಯಲ್ಲಿ ಪ್ರತಿಭಾನ್ವೇಷಣೆ ಅಥವಾ ಪ್ರತಿಭೆಯ ಸರಿಯಾದ ಒಂದು ಮೌಲ್ಯಮಾಪನ ಆಗುತ್ತಿದೆಯೋ ಇಲ್ಲವೋ ಎನ್ನುವ ವಿಚಾರಗಳು ಈ ಸರ್ಕಾರದಲ್ಲಿ ಸಾಕಷ್ಟು ಆಗಿವೆ. ಶಿಕ್ಷಣ ತಜ್ಞರಲ್ಲೂ ಕೂಡ ಆಗಿದೆ. ಈ ವಿಚಾರಗಳನ್ನು ನಾವು ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಇದನ್ನು ವಿಚಾರ ಮಾಡುತ್ತೇವೆ.

ಅಧ್ಯಕ್ಷರು.—ಈಗ ಕಾಗದಪತ್ರಗಳ ಮಂಡನೆ,

ಟಾಡಾ ಕಾನೂನನ್ನು ಕೈ ಬಿಡುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್.—ಟಾಡಾ ಕಾನೂನನ್ನು ಅಮಲಿಗೆ ತಂದು ಭಯೋತ್ಪಾದನೆಯನ್ನು ನಿಗ್ರಹ ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದನ್ನು ರಾಜ್ಯದಲ್ಲಿ ತರುವ ಅವಶ್ಯಕತೆ ಇದೆಯೇ ? ಅಂತಹ ಒಂದು ಭಯೋತ್ಪಾದನಾ ವಾತಾವರಣ ನಮ್ಮ ರಾಜ್ಯದಲ್ಲಿ ಇದೆಯೇ ? ನಮ್ಮ ರಾಜ್ಯಕ್ಕೆ ಈ ಶಾಸನ ಬೇಕೇ ?

ಅಧ್ಯಕ್ಷರು.—ಅದನ್ನು ನಂತರ ಚರ್ಚೆ ಮಾಡುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ವಿರೋಧ ಪಕ್ಷದ ಎಲ್ಲಾ ಮುಖಂಡರೂ ಕೂಡ ಈ ಕಾನೂನು ಬೇಕಾಗಿಲ್ಲ ಎಂದಿದ್ದೇವೆ. ರೈತಸಂಘದ ಮುಖಂಡರೂ ಇದನ್ನು ಹೇಳಿದ್ದಾರೆ. ಈಗ ಶಾಂತಿ ಸುವ್ಯವಸ್ಥೆ ಕಾಪಾಡುವ ಬಗ್ಗೆ ಸರ್ಕಾರದಲ್ಲಿ ಅನೇಕ ರೀತಿಯ ಅಧಿಕಾರ ಇದೆ. ಐಪಿಸಿ ಇದೆ, ಆರ್ಮ್ಸ್ ಆಕ್ಟ್ ಇದೆ, ಸಿಆರ್‌ಪಿಸಿ ಇದೆ. ಕಾನೂನು ಚೌಕಟ್ಟಿನಲ್ಲಿ ಬೇಕಾದಷ್ಟು ಅಧಿಕಾರ ಇದೆ. ಆದ್ದರಿಂದ ರಾಜ್ಯದಲ್ಲಿ ಇಂತಹ ಒಂದು ಒಳ್ಳೆಯ ವಾತಾವರಣ ಇರುವಾಗ...

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ, ಇದು ಆದ ತಕ್ಷಣ...

(ಗೊಂದಲ) ಆರ್ಡರ್... ಆರ್ಡರ್...

ಶ್ರೀ ವಾಟಾಳ್ ನಾಗರಾಜ್.—ಇದು ಒಂದು ಕರಾಳ ಶಾಸನವಾಗಬಹುದೆ. ಮಾನ್ಯ ಮುಖ್ಯ ಮಂತ್ರಿಗಳು ಏನು ತರಬೇಕೆಂದು ಹೇಳಿದ್ದಾರೆ ಇದನ್ನು ನಿಲ್ಲಿಸಿದರೆ ರಾಜ್ಯಕ್ಕೆ ಕ್ಷೇಮವೆಂದು ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಯಾವುದೇ ಕಾನೂನನ್ನು ನೋಡಬೇ ತುರ್ತು ಪರಿಸ್ಥಿತಿಗೆ ಮಿರುವ ರೀತಿಯಲ್ಲಿ ಅಧಿಕಾರಿಗಳು ವರ್ತನೆ ಮಾಡಿದ್ದಾರೆ. ಪೋಲೀಸರ ದೌರ್ಜನ್ಯ ನಡೆದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಇರುವ ಕಾನೂನು ಉಪಯೋಗ ಮಾಡಿ ಶಾಂತಿ ಸುವ್ಯವಸ್ಥೆ ಕಾಪಾಡುವ ಹೊಣೆ ಮುಖ್ಯಮಂತ್ರಿಗಳದ್ದು. ವಿರೋಧಪಕ್ಷದ ಎಲ್ಲಾ ಮುಖಂಡರೂ ಸಲಹೆ ಕೊಟ್ಟಿದ್ದೇವೆ. ದಯವಮಾಡಿ ಟಾಡಾ ಕಾನೂನನ್ನು ಕೈಬಿಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಾವು ಮುನ್ಸೂಚನೆ ನೀಡಿದ್ದೀರಿ. ಟಾಡಾ ಕಾನೂನಿನ ಬಗ್ಗೆ ಕೆಲವೊಮ್ಮೆ ಭಿನ್ನವಾದ ಅಭಿಪ್ರಾಯಗಳು ಬರತಕ್ಕಂತಹ ಸಂದರ್ಭಗಳು ಕೂಡ ಇದೆ, ಇಲ್ಲವೆಂಬ ಮಾತನ್ನು ನಾನು ಅಲ್ಲಗೆಳೆಯುವುದಿಲ್ಲ. ಈಗ ನಾವು ಯಾವ ಪರಿಸ್ಥಿತಿಯಲ್ಲಿ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೇವೆಂದು ವಿರೋಧ ಪಕ್ಷಗಳ ನಾಯಕರುಗಳ ಸಭೆಯನ್ನು ಕರೆದಾಗ ವಿವರಗಳನ್ನು ಕೂಡ ಕೊಟ್ಟಿವು ಹಾಗೂ ಶಾಸನ ಸಭೆಯಲ್ಲೂ ಕೂಡ ಕೊಡುತ್ತೇನೆಂಬ ಮಾತನ್ನು ಆ ದಿವಸವೇ ಹೇಳಿದ್ದೆ. ಆ ಮಾತನ್ನು ನಾನು ಇಂದು ಇಲ್ಲಿ ನೆನಪು ಮಾಡುತ್ತಿದ್ದೇನೆ. ಆದ್ದರಿಂದ ಆರ್ಜೆಂಟ್ ಆರ್ಜೆಂಟಾಗಿ ಪ್ರಸ್ತಾಪ ಮಾಡುವುದು ಬೇಡವೆಂಬುದು ನನ್ನ ಭಾವನೆ. ತಾವು ಟಾಡಾ ವಿಚಾರದಲ್ಲಿ ಎಷ್ಟು ವಿವರವಾಗಿ ಹೇಳುತ್ತೀರೋ ಅಷ್ಟೇ ವಿವರವಾಗಿ ನಾನು ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ತಾವು ಆರ್ಜೆಂಟ್ ಆರ್ಜೆಂಟಾಗಿ ಇದನ್ನು ಪ್ರಸ್ತಾಪ ಮಾಡುವುದು ಬೇಡ, ನಾನು ಆರ್ಜೆಂಟ್ ಆರ್ಜೆಂಟಾಗಿ ಉತ್ತರ ಕೊಡುವುದೂ ಕೂಡ ಬೇಡ, ಅದು ಸಾಧುವೂ ಕೂಡ ಅಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಆರ್ಜೆಂಟ್ ಆರ್ಜೆಂಟಾಗಿ ತಂದಿದ್ದೀರಿ ನಾವು ಆರ್ಜೆಂಟಾಗಿ ಪ್ರಸ್ತಾಪ ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಟಾಡಾ ಕಾನೂನು ತರಲು ಇಲ್ಲಿ ಪಂಜಾಬ್ ಕಾಶ್ಮೀರದಂತಹ ಪ್ರಶ್ನೆ ಇದೆಯೇ ? ಟಾಡಾ ಕಾನೂನನ್ನು ಇಲ್ಲಿ ತಂದು ಇಲ್ಲಿ ಪಂಜಾಬ್, ಕಾಶ್ಮೀರದ ಪರಿಸ್ಥಿತಿ ಇದೆ ಎನ್ನುತಕ್ಕಂತಹ ವಿಚಾರವನ್ನು ಇಡೀ ಜಗತ್ತಿಗೆ ಹೇಳಿ ಕೊಟ್ಟಹಾಗಾಗುತ್ತದೆ. ಅಂತಹ ಪರಿಸ್ಥಿತಿ ರಾಜ್ಯದಲ್ಲಿ ಇಲ. ಸ್ವಲ್ಪ ಕಮ್ಯೂನಲ್ ಟೆನ್‌ಷನ್ ಆಗಿರಬಹುದು. ರಾಜ್ಯದ ಇತಿಹಾಸದಲ್ಲಿ ಹಿಂದೆ ಆಗಿರಲಾರದಷ್ಟು ಕಮ್ಯೂನಲ್ ಟೆನ್‌ಷನ್ ಆಗಿದೆ. ಅದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಆದರೆ ಟಾಡಾ ಕಾನೂನನ್ನೇ ತಂದು ಎನ್‌ಫೋರ್ಸ್ ಮಾಡುವ ಅವಶ್ಯಕತೆ ನಮಗೆ ಇಲ್ಲ. ಅದನ್ನು ವಿತ್‌ಡ್ರಾ ಮಾಡಿ. ಸಾಕಷ್ಟು ಅಧಿಕಾರ ತಮ್ಮ ಕೈಯ್ಯಲ್ಲೇ ಇದೆ. ಅದರ ಮೂಲಕ ನನ್ನನ್ನು ಕೂಡ ಒಳಕ್ಕೆ ಹಾಕಬಹುದು. ಒಂದು ಕೂಸನ್ನು ಕೂಡ ಒಳಕ್ಕೆ ಹಾಕಬಹುದು. ಮಿನಿಮಮ್ ೩ ವರ್ಷ ಇಂಪ್ರಿಸೇನ್‌ಮೆಂಟ್, ಮ್ಯಾಕ್ಸಿಮಮ್ ಎಂದರೆ ಲೈಫ್ ಪುಲ್ ಇಂಪ್ರಿಸೇನ್‌ಮೆಂಟ್ ಎಂದು ಹಾಕಬಹುದು. ಇಂತಹ ಕಪ್ಪು ಕಾನೂನನ್ನು ಇಲ್ಲಿ ತಂದು ಇದನ್ನು ಪಂಜಾಬ್, ಕಾಶ್ಮೀರ ಪ್ರಾಬ್ಲಂ ಮಾಡಬೇಕೆಂದು ಇದ್ದೀರಾ ? ಇದು ಸರಿಯಲ್ಲ. ರಾಜ್ಯದಲ್ಲಿ ಕಮ್ಯೂನಲ್ ಟೆನ್‌ಷನ್ ಕ್ರಿಯೇಟ್ ಆಗಿದೆ ಆದರೆ ಆದಕ್ಕೆ ಈ ಕಾನೂನು ಆಗತ್ಯ ಇಲ್ಲ. You can invoke it and you can misuse it. I request you through the Speaker, please withdraw it. It is a black Act because it was made only to take care of Punjab and Kashmir problems.

ಶ್ರೀ ವಾಟಾಳ್ ನಾಗರಾಜ್.—ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಕೂಡ ಇದು ಬರುವುದಿಲ್ಲ. ಈ ಒಂದು ಪರಿಸ್ಥಿತಿ ಏನು ಇದೆ ಇದು ಅತ್ಯಂತ ಘೋರವಾದದ್ದು. ಇದನ್ನು ಹಿಂದಕ್ಕೆ ತೆಗೆದುಕೊಳ್ಳುವುದು ಒಳ್ಳೆಯದು. ಈ ಸರಕಾರವನ್ನು ಪೋಲೀಸ್ ರಾಜ್ಯವನ್ನಾಗಿ ಮಾಡುವುದು ಬೇಡ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದರಿಂದಾಗಿ ಅಧಿಕಾರಿಗಳು ಅಧಿಕಾರವನ್ನು ಸಂಪೂರ್ಣವಾಗಿ ದುರುಪಯೋಗ ಮಾಡಿಕೊಳ್ಳುತ್ತಾರೆನ್ನುವ ಅಂಕೆ ಇದೆ.

ಶ್ರೀ ಎಸ್. ಬಂಗಾರಪ್ಪ.—ಟಾಡಾ ಸೇರಿ ತಾವು ವಿವರವಾಗಿ ಮಾತನಾಡಬೇಕೆಂಬುದು ಸರಕಾರದ ಅಭಿಪ್ರಾಯ. ತಾವು ಆರ್ಜಿಂಟಾಗಿ ತಂದಿದ್ದೀರಿ ಆದಕ್ಕೇ ನಾವು ಆರ್ಜಿಂಟಾಗಿ ಮಾತನಾಡುತ್ತೇವೆಂದು ಮಾನ್ಯ ಯಡಿಯೂರಪ್ಪನವರ ಏನು ಹೇಳಿದರು ಅದು ಸರಿಯಲ್ಲ. ತಾವುಗಳು ವಿವರವಾಗಿ ಮಾತನಾಡಬೇಕೆಂಬುದು ನಮ್ಮ ಆಸೆಯಾಗಿದೆ. ಆ ದಿವಸ ಲಾ ಅಂಡ್ ಆರ್ಡರ್ ಬಗ್ಗೆ ಚರ್ಚೆಗೆ ಬಂದಾಗಲೂ ಕೂಡ ಅದಕ್ಕೆ ಸಂಬಂಧಪಟ್ಟಂತ ಟಾಡಾ ಕಾನೂನು ತರತಕ್ಕಂತ ಸಂದರ್ಭಗಳನ್ನು ಸರಕಾರ ಮನಗಂಡು ತಂದಿದೆ ಎಂಬ ವಿಚಾರಗಳನ್ನು ವಿರೋಧ ಪಕ್ಷದ ನಾಯಕರ ಸಭೆ ಕರೆದಾಗ ಕೂಡ ಸ್ಪಷ್ಟಪಡಿಸಿದ್ದೇನೆ. ಹಾಗೂ ಶಾಸನ ಸಭೆಯಲ್ಲಿ ಸರಕಾರದ ಪರವಾಗಿ ಹೇಳುತ್ತೇನೆಂಬ ಎನ್ನುವ ಮಾತನ್ನು ಕೂಡ ಹೇಳಿದ್ದೇನೆ. ಕೆಲವು ಸಾರಿ ನಿಮ್ಮ ಅನಿಸಿಕೆಗಳು, ಶಂಕೆಗಳು, ಸಹಜವಾಗಿ ಉದ್ಭವವಾಗತಕ್ಕಂತಹ ಸಂದರ್ಭ ಇಲ್ಲಿ ಇರಬಹುದು. ತಾವು ತಮ್ಮ ಭಾವನೆಗಳನ್ನು ತಮ್ಮ ಭಾಷಣದಲ್ಲಿ ವಿವರವಾಗಿ ಅಧ್ಯಕ್ಷರ ಅನುಮತಿ ಪಡೆದು ಪ್ರಸ್ತಾಪ ಮಾಡಬೇಕು ಅದನ್ನು ಕೇಳಲು ಆಸಕ್ತಿಯಿಂದ ನಾವು ಇಲ್ಲಿ ಕುಳಿತಿದ್ದೇವೆ. ನಾನೂ ಕೂಡ ಸಂಪೂರ್ಣವಾಗಿ ಇಲ್ಲಿ ಕುಳಿತುಕೊಳ್ಳುತ್ತೇನೆ. ಆದಕ್ಕೆ ಉತ್ತರವನ್ನು ಕೂಡ ಪ್ರತ್ಯೇಕವಾಗಿ ನೀಡುತ್ತೇನೆ ಟಾಡಾ ವಿಚಾರದಲ್ಲಿ ನಾನು ಮಿಕ್ಸ್ ಅಪ್ ಮಾಡುವುದಿಲ್ಲ. ಇದಕ್ಕೆ ಪ್ರತ್ಯೇಕವಾದಂತ ಉತ್ತರವನ್ನು ನಾನು ಕೊಡುತ್ತೇನೆ. ತಾವು ಯಾವ ಒಂದು ಚಾಪ್ಟರ್ ಮೇಲೆ ಮಾಲ್ಲನಾಡುತ್ತೀರೋ ಅದೇ ಚಾಪ್ಟರ್ ಮೇಲೆ ನಾನು ಕೂಡ ಉತ್ತರ ಕೊಡುತ್ತೇನೆ. ಪ್ರತ್ಯೇಕ ಅಧ್ಯಾಯವಾಗಿಯೇ ಉತ್ತರ ಕೊಡುತ್ತೇನೆ. ಆದಕ್ಕೆ ಕೆಲವು ಕಾಲ ನಿಗದಿ ಮಾಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಟಾಡಾ ವಿಚಾರದಲ್ಲಿ ಸರಕಾರೀ ಆಜ್ಞೆ ಏನಾದರು ಹೊರಟಿದೆಯೇ ಅದು ಏನಾದರೂ ಅಸ್ತಿತ್ವದಲ್ಲಿದೆಯೇ ?

ಶ್ರೀ ಎಸ್. ಬಂಗಾರಪ್ಪ.—ಅದು ಏನು ಎನ್ನುವುದರ ಬಗ್ಗೆ ಕೂಡ ಇಲ್ಲಿ ಉತ್ತರ ಕೊಡತಕ್ಕಂಥಾದ್ದು ಇದೆ. ವಿವರವಾಗಿ ಚರ್ಚೆಮಾಡಿ ಮಾನ್ಯ ದೇಶಪಾಂಡೆಯವರು ಕೂಡ ತಮ್ಮ ಅಭಿಪ್ರಾಯವನ್ನು ಹೇಳಲಿ ತಾವೂ ಕೂಡ ತಮ್ಮ ಅಭಿಪ್ರಾಯವನ್ನು ಹೇಳಿ. ಆ ವಿಚಾರ ಈ ಸದನದಲ್ಲಿ ಚರ್ಚೆಗೆ ಬರುವುದರಿಂದ, ನಾನು ನಿಮ್ಮ ಅನುಕೂಲ ದೃಷ್ಟಿಯಿಂದ ಹೇಳುವುದು ವಿವರಗಳನ್ನು ಇಟ್ಟು ತಾವು ಮಾತನಾಡಿದರೆ, ವಿವರಗಳನ್ನು ಇಟ್ಟು ಸರ್ಕಾರ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ. ತಾವು ವಿವರಗಳನ್ನು ಇಟ್ಟು ಮಾತನಾಡಿ. ಆದಕ್ಕೆ ನಾನು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಮಿಕ್ಸ್ ಮಾಡುವುದಕ್ಕೆ ಹೋಗುವುದಿಲ್ಲ. ಆದಕ್ಕೆ ಪ್ರತ್ಯೇಕವಾಗಿ ಉತ್ತರ ಕೊಡುತ್ತೇನೆ. It is a commitment on the part of the Government.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಒಂದು ನಿಮಿಷ ಈಲ್ಡ್ ಆಗಬೇಕು. ಟಾಡಾ ಕಾಯಿದೆ ಆದೇಶವನ್ನು ಹೊರಡಿಸಿದ್ದೀರಾ ? ಅದನ್ನು ಹೇಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಶಾಸಕರಾಗಿದ್ದ ಶ್ರೀ ಗುಜ್ಜಾಲ್‌ಹನುಮಂತಪ್ಪನವರು ನಿಧನ ಹೊಂದಿದ ಪ್ರಯುಕ್ತ ದಿನಾಂಕ ೧೯-೧೧-೧೯೯೦ರಂದು ಸಭೆಯ ಮುಂದಿದ್ದ ಯಾವ ಕಾರ್ಯಕಲಾಪಗಳನ್ನು ನಡೆಸದೆ ಸಭೆಯನ್ನು ಮುಂದೂಡಲಾಯಿತು. ಆದಕಾರಣ ನಿನ್ನೆಯ ದಿವಸ ಪಟ್ಟಿ ಮಾಡಲಾಗಿದ್ದ ಒಂದನೇ ಪಟ್ಟಿಯಲ್ಲಿದ್ದ ಚುಕ್ಕೆ ಗುರ್ತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳನ್ನೂ ಉತ್ತರಗಳೊಂದಿಗೆ ಸಭೆಯ ಮುಂದೆ ಮಂಡಿಸುತ್ತೇನೆ.

ಜಿಲ್ಲಾ ಪರಿಷತ್ ಹಾಗೂ ಮಂಡಲ್ ಪಂಚಾಯಂತ್ ಕಾಯ್ದೆಗೆ ತಿದ್ದುಪಡಿ.

೫೫. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಿಲ್ಲಾ ಪರಿಷತ್ ಹಾಗೂ ಮಂಡಲ್ ಪಂಚಾಯತ್ ಕಾನೂನಿಗೆ ತಿದ್ದುಪಡಿ ತರುತ್ತಿರುವುದು ನಿಜವೇ ?

ಆ) ಕಾನೂನಿನ ಬದಲಾವಣೆಯಿಂದ ಪಂಚಾಯತ್ ರಾಜ್ ವ್ಯವಸ್ಥೆಗೆ ಆಗುವ ಲಾಭ ಹಾಗೂ ಹಾನಿ ಏನು ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ ಸಚಿವರು).—

ಅ) ನಿಜ.

ಆ) ಪಂಚಾಯತ್ ರಾಜ್ ವ್ಯವಸ್ಥೆಯ ಕಾರ್ಯವನ್ನು ಹೆಚ್ಚು ಅರ್ಥಪೂರ್ಣ ಹಾಗೂ ಪರಿಣಾಮಕಾರಿಯಾಗಿ ಮಾಡಲು ತಿದ್ದುಪಡಿಗಳನ್ನು ತರಲಾಗುತ್ತಿದೆ.

ಜಿಲ್ಲಾ ಪರಿಷತ್ತುಗಳಿಂದ ವಾರ್ಷಿಕ ವರದಿಗಳನ್ನು ಸಲ್ಲಿಸುವುದು

೧೫೯. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಎಲ್ಲಾ ಜಿಲ್ಲಾಪರಿಷತ್ತುಗಳು ವಾರ್ಷಿಕ ವರದಿಯನ್ನು ಜಿಲ್ಲಾ ಪರಿಷತ್ತುಗಳು ಪ್ರಾರಂಭವಾದಾಗಲಿಂದ ಅವುಗಳನ್ನು ವಿಧಾನ ಮಂಡಲಕ್ಕೆ ಸಲ್ಲಿಸಲು ಸರ್ಕಾರಕ್ಕೆ ಸಲ್ಲಿಸಿವೆಯೇ ?

ಆ) ವಾರ್ಷಿಕ ವರದಿ ಸಲ್ಲಿಸದೆ ಇದ್ದ ಜಿಲ್ಲಾ ಪರಿಷತ್ತುಗಳ ಹೆಸರುಗಳೇನು?

ಇ) ಇಂತಹ ಜಿಲ್ಲಾಪರಿಷತ್‌ಗಳಿಂದ ವಾರ್ಷಿಕ ವರದಿ ತರಿಸಲು ಸರ್ಕಾರ ಏನು ಕ್ರಮ ತೆಗೆದು ಕೊಂಡಿದೆ ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ೧೭ ಜಿಲ್ಲಾ ಪರಿಷತ್ತಿನ ೧೯೮೭-೮೮ನೇ ಸಾಲಿನ ವಾರ್ಷಿಕ ವರದಿಗಳನ್ನು ವಿಧಾನ ಮಂಡಲಕ್ಕೆ ಕಳುಹಿಸಲಾಗಿದೆ.

ಆ) ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ.

ಇ) ಕೊಡಲೇ ಕಳುಹಿಸುವಂತೆ ಕೋರಿ ಟೆಲೆಕ್ಸ್ ಸಂದೇಶ ಕಳುಹಿಸಲಾಗಿದೆ.

ಬೆಂಗಳೂರು ಜಿಲ್ಲಾ ಪರಿಷತ್‌ನವರಿಂದ ವೆಚ್ಚ ಮಾಡಿದ ಮೊಬಲಗು

೧೦೦. ಶ್ರೀ ಸಾದತ್ ಅಲಿಕಾನ್ (ಚನ್ನಪಟ್ಟಣ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದ ನಂತರ ಖರ್ಚು ಮಾಡಿರುವ ಹಣ ಎಷ್ಟು ?

(ಲೆಕ್ಕ ಶೀರ್ಷಿಕೆ ಮತ್ತು ಇಲಾಖಾವಾರು ಮಾಹಿತಿಯನ್ನು ಒದಗಿಸತಕ್ಕದ್ದು)